


### ಐಪಿಎಲ್: ಅಪಾರ ಮಾಹಿತಿ

'ಸುಧಾ' ಮಾರ್ಚ್14ರ ಮುಖಪುಟ ಲೇಖನ ಮಹಮ್ಮದ್ ನೂಮಾನ್‌ರ 'ಸಿಕ್ಸರ್ ಸರದಾರರು' ಅಪಾರ ಮಾಹಿತಿ ನೀಡಿ, ಕ್ರಿಕೆಟ್ ಪ್ರಿಯರ ಮನತಣಿಸಿತು.

-ಕೆ.ವಿ.ಸೀತಾರಾಂ ಬಿಜೈ, ಮಂಗಳೂರು/ ಪ್ರೊ. ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ

### ಹಣಕ್ಕೆ ಅನಗತ್ಯ ಪ್ರಚಾರ

ಹಣವೇ ಮುಖ್ಯವಾಗಿರುವ ಐಪಿಎಲ್ ಕ್ರಿಕೆಟ್ ಬಗ್ಗೆ 'ಸುಧಾ'ದಂತಹ ಸದಭಿರುಚಿ ಪತ್ರಿಕೆ ತನ್ನ ಅಮೂಲ್ಯ ಪುಟಗಳನ್ನು ಮೀಸಲಿಟ್ಟಿದ್ದು ಅನಗತ್ಯವಾಗಿತ್ತು.

-ಬಿಲ್ಲೇಶ್ವರ ಅಚ್ಚು, ಹುಂಚ

### ಸೋಲು- ಗೆಲುವು ಹಣೆಪಟ್ಟಿ ಬೇಡ

'ಕೊನೆಗೂ ಸೋಲುವುದು ಹೆಣ್ಣು!' ಶಿಕಾಕು ವಿಚಾರ ಲಹರಿ ಪೂರ್ಣ ಸತ್ಯ ಅನ್ನಿಸಲಿಲ್ಲ. ಸತ್ಯಾನ್ವೇಷಣೆ, ಸುಖ, ಶಾಂತಿಯ ಹುಡುಕಾಟ ಮತ್ತು ಅವಶ್ಯಕತೆ ಗಂಡು ಹೆಣ್ಣು ಇಬ್ಬರಿಗೂ ಬೇಕಿರುವಾಗ, ತಮ್ಮ ಬದುಕಿನ ಮಿತಿಯಲ್ಲಿ ಅದನ್ನು ಸಾಧಿಸಬೇಕೇ ಹೊರತು– ಸೋಲು–ಗೆಲುವಿನ ಹಣೆಪಟ್ಟಿ ಸರಿಯಲ್ಲ.

'ಮಾತೇ ಮುತ್ತು' ಟ್ರಾಫಿಕ್ ಸಿಗ್ನಲ್ ಇದ್ದಂತೆ. ಕೆಲವೊಮ್ಮೆ ಗ್ರಂಥಾಲಯ ಹೊಕ್ಕುಬಂದಂತೆ.

'ಜಾಣರ ಪೆಟ್ಟಿಗೆ' ವಿಭಾಗದ 'ಪ್ರತಿಸ್ಪಂದನ'ದಲ್ಲಿ ಕಿರುತೆರೆಯ ಎಲ್ಲ ವಿಭಾಗದವರ ಸಂದರ್ಶನ ಮೌಲಿಕ ಹಾಗೂ ಪರಿಣಾಮಕಾರಿ. ಆಹಾರ ಪುಟ ಬಾಯಲ್ಲಿ ನೀರೂರಿಸುತ್ತದೆ.

-ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ

### ಶಿವರಾತ್ರಿಗೆ ಸೂಕ್ತ

ಶಿವರಾತ್ರಿ ಸಂದರ್ಭಕ್ಕೆ ಸರಿಯಾಗಿ ಸೀತಾ ಕೇಶವರ 'ದ್ವಾದಶ ಜ್ಯೋತಿರ್ಲಿಂಗ ದರ್ಶನ' ಮುದ ನೀಡಿತು.

-ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ವಿದ್ಯುತ್ ಉಳಿಸಲು ಸಲಹೆ

'ವಿದ್ಯುತ್ ಉಳಿಸುವುದು ಹೇಗೆ?' ಪುಷ್ಪಾ ರಾವ್ ನೀಡಿದ್ದ ಸಲಹೆಗಳು ಮಾರ್ಗದರ್ಶಿಯಾಗಿದ್ದವು.

ಎಸ್.ನಿತ್ಯ, ಮೂಡಬಿದಿರೆ/ಬಿ.ಎನ್.ನಿಶ್ಚಯ್, ಹಾಸನ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಉತ್ತಮ ಕಥೆ

ಎಚ್.ಜಿ.ಮಳಗಿಯವರ 'ಪುನರ್ವಸತಿ' ಕಥೆ ಮೆಚ್ಚುಗೆಯಾಯಿತು.

-ಪಿ.ವೆಂಕಟೇಶ್ವರಿ, ಯಲ್ಲಾಪುರ/ಕೆ.ಎಸ್. ವಿಠಲರಾವ್, ಬೆಂಗಳೂರು/ ಕೊಹಿಮ, ಬಸರಕೋಡು

### 'ಎಂಜಲು' ಎಂದರೆ 'ಮುಸುರೆ' ಅಲ್ಲ

ಮಾರ್ಚ್ 7ರ 'ಪದಬಂದ'ದ ಮೇಲಿನಿಂದ ಕೆಳಗೆ 2ನೆಯ ಪದಕ್ಕೆ ಸುಳಿವು 'ಎಂಜಲು'. ಈ ಪದಕ್ಕೆ ಸರಿಯಾದ ಅರ್ಥ 'ತಿಂದು ಉಳಿದದ್ದು', 'ಕಚ್ಚಿದ್ದು', 'ನಾಲಿಗೆ ಅಥವಾ ಜೊಲ್ಲಿಗೆ ತಗುಲಿದ್ದು.' ಆದರೆ 'ಮುಸುರೆ' ಎಂದು ತಪ್ಪು ಪದ ಕೊಡಲಾಗಿತ್ತು. 'ಮುಸುರೆ' ಎಂದರೆ 'ಬೇಯಿಸಿದ ಪದಾರ್ಥ'.

ಶ್ರೀನಾಥ್ ಕೊನೇಟಿ, ಬೆಂಗಳೂರು

### ಆತ್ಮಸ್ಥೈರ್ಯ ತಂದ ಜ್ಯೋತಿ

ಏಳು ವಾರಗಳ ಕಾಲ ಪ್ರಕಟವಾದ ಡಾ.ಎಚ್. ಗಿರಿಜಮ್ಮನವರ 'ತಮಸೋಮಾ ಜ್ಯೋತಿರ್ಗಮಯ' ಕುತೂಹಲಕಾರಿಯಾಗಿತ್ತು. ಪತ್ತೇದಾರಿ ಕಾದಂಬರಿ ಓದುವ ಯಾರೇ ಆದರೂ, ಡಾ. ರಂಗರಾಜು ಅವರೇ ಅಪರಾಧಿ ಎಂದು ಊಹಿಸುವುದು ಸಹಜವಾಗಿತ್ತು. ವೈದ್ಯಕೀಯ ವಿವರಗಳ ಮಾಹಿತಿ ಅಪರೂಪದ್ದಾಗಿತ್ತು. ಅತ್ಯಾಚಾರಕ್ಕೆ ಒಳಗಾದ ಮಹಿಳೆ ಹೋರಾಟ ಮಾಡಿ, ಆರೋಪಿಗೆ ಶಿಕ್ಷೆಯಾಗುವಂತೆ ನೋಡಿ ಕೊಳ್ಳಬೇಕು ಎಂಬ ಆತ್ಮಸ್ಥೈರ್ಯ ತುಂಬಿದ ಕಥೆ– ಒಟ್ಟಿನಲ್ಲಿ ಚೆನ್ನಾಗಿತ್ತು.

-ಎ.ಪಿ.ರಂಗನಾಥ್, ಮೈಸೂರು/ ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು/ ಕೊಹಿಮ, ಬಸರಕೋಡು/ ಬಿ.ಎಸ್.ಮುಳ್ಳೂರ, ಹಲಗತ್ತಿ/ ಪದ್ಮಶರ್ಮ, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಸಿ.ಎಸ್.ಗೋಪಾಲಕೃಷ್ಣ, ಮೈಸೂರು/ ರಾಜೇಂದ್ರ ಹೆಗಡೆ, ಹಾವೇರಿ

### ಕುತೂಹಲ, ಆದರೆ ಅಡಗೂಲಜ್ಜಿ!

'ತಮಸೋಮಾ...' ಆರಂಭದಲ್ಲಿ ಸ್ವಾರಸ್ಯವಾಗಿತ್ತು. ಕರ್ತವ್ಯನಿರತ ವೈದ್ಯೆಯೊಬ್ಬರು ಪ್ರಕರಣವನ್ನು ವಕೀಲೆಯೊಬ್ಬರಿಗೆ ವಹಿಸಿ, ಕಥಾ ನಾಯಕಿ ಹಾಗೂ ಆಕೆಯ ತಾಯಿಯನ್ನು ಪ್ರಕರಣ ಮುಂದುವರಿಸಲು ಪ್ರೋತ್ಸಾಹಿಸಿದ್ದು ಕುತೂಹಲ ತಂದಿತು. ಕೊನೆಯ ಭಾಗದಲ್ಲಿ ಅತ್ಯಾಚಾರಕ್ಕೆ ಬಲಿಯಾದ ಯುವತಿ 'ಅಪರಾಧಿ'ಯನ್ನು ಪತ್ತೆ ಹಚ್ಚಿದ್ದು, ಹರಕೆಯ ಕುರಿಯಾಗಿದ್ದ ಆಸ್ಪತ್ರೆ ಜವಾನ ಬಿಡುಗಡೆಯಾಗಿದ್ದು ಹಾಗೂ ಡಾ. ರಂಗರಾಜು ಅವರು ಕೋರ್ಟಿನಲ್ಲಿ ಬಹಿರಂಗ ಹೇಳಿಕೆ ನೀಡಿದ್ದು ಅಡಗೂಲಜ್ಜಿಯ ಕತೆಯೊಂದನ್ನು ಕೇಳಿದಂತೆ ಭಾಸವಾಯಿತು!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ವೈದ್ಯರಿಗೆ ಗೌರವ, ಪೊಲೀಸರಿಗೆ ಅಗೌರವ!

ಡಾಕ್ಟರ್ ಗಿರಿಜಮ್ಮನವರಿಗೆ ಸಹೋದ್ಯೋಗಿ ವೈದ್ಯರ ಬಗ್ಗೆ ಇರುವ ಗೌರವ ಪೊಲೀಸ್ ಬಗ್ಗೆ ಇಲ್ಲವೆನಿಸಿತು. ಪೊಲೀಸ್ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಅವರನ್ನು 'ಅವನು', 'ಇವನು', 'ಬಂದ', 'ಹೋದ' ಎಂದು ಸಂಬೋಧಿಸಿದ್ದಾರೆ!

-ಬಿ.ಆರ್.ಶಂಕರ್, ಬೆಂಗಳೂರು

### ಕಥೆಯ ತಿರುಳಿಗೆ ಸೂಕ್ತ ಚಿತ್ರ

ಕುತೂಹಲ ಕಾಯ್ದುಕೊಂಡು ಹೋಗುವಲ್ಲಿ ಗಿರಿಜಮ್ಮನವರ ಕಾದಂಬರಿ 'ಬೆಸ್ಟ್'. ಕಲಾವಿದ ಮನೋಹರ್ ಚಿತ್ರಗಳು ಕಥೆಯ ತಿರುಳಿನ ಪ್ರತೀಕವಾಗಿದ್ದವು.

-ಬಳ್ಳಾರಿ ಮಧ್ವರಾಜ್, ಬೆಂಗಳೂರು

### ಮಾಸ್ತಿ ಕಥಾ ಪುರಸ್ಕಾರ

'ಮಾಸ್ತಿ ಕಥಾ ಪುರಸ್ಕಾರ'ಕ್ಕೆ 2011ರಲ್ಲಿ ಹಾಗೂ 2012ರಲ್ಲಿ ಪ್ರಕಟವಾದ ಕಥಾ ಸಂಕಲನಗಳನ್ನು ಆಹ್ವಾನಿಸಲಾಗಿದೆ. ಪ್ರಥಮ ಪ್ರಶಸ್ತಿಗೆ 15ಸಾವಿರ ಹಾಗೂ ದ್ವಿತೀಯ ಪ್ರಶಸ್ತಿಗೆ 8 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಆಸಕ್ತರು ನಾಲ್ಕು ಪ್ರತಿಗಳನ್ನು ಗ್ರಂಥಾಲಯ ಇಲಾಖೆಯ ಆಯಾ ವರ್ಷದ ನೋಂದಣಿ ಪ್ರತಿಯೊಂದಿಗೆ ಮಾರ್ಚ್ 30ರ ಒಳಗಾಗಿ ಮಾವಿನಕೆರೆ ರಂಗನಾಥನ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ನಂ.21, ಎಲ್ಲಪ್ಪ ಗಾರ್ಡನ್, 10ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು– 560003 ಇಲ್ಲಿಗೆ ಕಳಿಸಲು ಕೋರಲಾಗಿದೆ.

ವಿವರಗಳಿಗೆ: 080–23363347

Orchid
TRAVEL & TOURS
No. 98, 1st Floor, DVG Road, Basavanagudi, Bangalore - 04
www.orchidtravels.net
Mob: 98800 79644

Mount Kailash & Manasa Sarovar
▪ Honest Prices



Enjoy Europe with Orchid

EUROPE TOURS
(All Inclusive)



15days, 09 Countries
( UK, France, Belgium, Netherland, Germany, Switzerland, Austria, Liechtenstein, Italy )

Cost includes
. Roundtrip Airfares with taxes from bangalore
. UK & Schengen Visa
. Hotel Accommodation
. All Meal
. All must see sight seeing with Entrance fee
. Overseas Mediclaim Insurance
. Services of a Tour Manager

Our Other Tours:
USA, Singapore - Malaysia - Thailand / China - Hong Kong - macau / Australia - NewZealand

Contact: 99000 80790
99000 80794